1946 (2191) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡು ಬಡವರಿಗೆ ವಿದ್ಯುತ್ ಸಂಪರ್ಕ ಒದಗಿಸುವ ರಾಜೀವ್‌ಗಾಂಧಿ ವಿದ್ಯುದೀಕರಣ ಯೋಜನೆ ಅನುಷ್ಠಾನಗೊಳ್ಳದಿರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಹಾಗಿದ್ದಲ್ಲಿ ಈವರೆಗೆ ಅನುಷ್ಠಾನವಾಗಿಲ್ಲದಿರುವುದಕ್ಕೆ ಕಾರಣವೇನು;

ಇ) ಯಾವಾಗ ಅನುಷ್ಠಾನಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಆ) ಮತ್ತು ಇ) ರಾಜ್ಯದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯು ಎರಡು ಹಂತಗಳಲ್ಲಿ ಮಂಜೂರಾತಿಯಾಗಿರುತ್ತದೆ. ಮೊದಲನೆಯ ಹಂತದಲ್ಲಿ 17 ಜಿಲ್ಲೆಗಳಿಗೆ ಡಿಸೆಂಬರ್ – 2005 ರಲ್ಲಿ ಅನುಮೋದನೆ ದೊರೆತಿರುತ್ತದೆ. ಈ ಜಿಲ್ಲೆಗಳೆಂದರೆ, (1) ಬೆಂಗಳೂರು ಗ್ರಾಮಾಂತರ, (2) ಕೋಲಾರ, (3) ತುಮಕೂರು, (4) ಚಿತ್ರದುರ್ಗ, (5) ದಾವಣಗೆರೆ, (6) ಮೈಸೂರು, (7) ಮಂಡ್ಯ, (8) ಹಾಸನ, (9) ಧಾರವಾಡ, (10) ಗದಗ, (11) ಹಾವೇರಿ, (12) ಬಿಜಾಪುರ, (13) ಬಾಗಲಕೋಟೆ, (14) ಬೀದರ್, (15) ರಾಯಚೂರು, (16) ಬಳ್ಳಾರಿ, (17) ಕೊಪ್ಪಳ. ಈ ಜಿಲ್ಲೆಗಳಲ್ಲಿ ಕಾಮಗಾರಿಗಳು ತ್ವರಿತಗತಿಯಲ್ಲಿ ಸಾಗುತ್ತಿವೆ.

ಎರಡನೆಯ ಹಂತದಲ್ಲಿ ಬಾಕಿ ಉಳಿದ 9 ಜಿಲ್ಲೆಗಳಾದ (1) ಗುಲ್ಬರ್ಗ, (2) ದಕ್ಷಿಣ ಕನ್ನಡ, (3) ಉಡುಪಿ, (4) ಶಿವಮೊಗ್ಗ, (5) ಚಿಕ್ಕಮಗಳೂರು, (6) ಬೆಳಗಾಂ, (7) ಉತ್ತರ ಕನ್ನಡ, (8) ಕೊಡಗು ಮತ್ತು (9) ಚಾಮರಾಜನಗರ ಜಿಲ್ಲೆಗಳಿಗೆ ಡಿಸೆಂಬರ್ – 2006 ರಲ್ಲಿ ಅನುಮೋದನೆ ದೊರೆತಿರುತ್ತದೆ.

ಮೊದಲನೆಯ ಹಂತದ 17 ಜಿಲ್ಲೆಗಳಲ್ಲಿ ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿ ಮಂಜೂರಾಗಿರುವ ಕಾಮಗಾರಿಗಳು ತ್ವರಿತಗತಿಯಲ್ಲಿ ಪ್ರಗತಿಯಲ್ಲಿವೆ.

ಎರಡನೆಯ ಹಂತದ 9 ಜಿಲ್ಲೆಗಳ ಪೈಕಿ ಗುಲ್ಬರ್ಗ, ಬೆಳಗಾವಿ, ಉತ್ತರ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ಗುತ್ತಿಗೆದಾರರಿಗೆ ಗುತ್ತಿಗೆಯನ್ನು ವಹಿಸಲಾಗಿದ್ದು, ಶೀಘ್ರದಲ್ಲಿಯೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಚಾಮರಾಜನಗರ ಜಿಲ್ಲೆಯಲ್ಲಿ ಕಾಮಗಾರಿಗಳನ್ನು ಈಗ ಪ್ರಾರಂಭಿಸಲಾಗಿರುತ್ತದೆ. ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ಶೀಘ್ರದಲ್ಲಿಯೇ ವಹಿಸಲಾಗುವುದು.